(ಕ) ಚಿಂಚೋಳಿ ಕ್ಷೇತ್ರದಲ್ಲಿ ತೊಗರಿ ಬೇಳೆ ನಾಶದಿಂದ ಹಾನಿಗೊಳಗಾದವರಿಗೆ ಪರಿಹಾರ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :— ಮಾನ್ಯ ಅಧ್ಯಕ್ಷರೆ, ತೊಗರಿಬೆಳೆ ನಾಶವಾಗಿರುವ ಸಲುವಾಗಿ, ರಿಲೀಫ್ ಕೊಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದ್ದು, ಇದರಿಂದ ಅನೇಕ ಹಳ್ಳಿಗೆ ಪರಿಹಾರಧನ ಸಿಕ್ಕಿದೆ. ಆದರೆ, ಚಿಂಚೋಳಿ ಕ್ಷೇತ್ರದಲ್ಲಿ ಇನ್ನೂ ಅರ್ಧದಷ್ಟು ಹಳ್ಳಿಗಳಿಗೆ ಪರಿಹಾರಧನ ಸಿಕ್ಕಿಲ್ಲ. ನಾನು ಹಳ್ಳಿಗಳಿಗೆ ಹೋದಾಗ ಪದೇ ಪದೇ ರೈತರು ಕೇಳುತ್ತಾರೆ. ಕೆಲವು ಕಡೆ ಇನ್ನು ಪರಿಹಾರಧನ ಕೊಟ್ಟಿಲ್ಲದೇ ಇರುವುದರಿಂದ, ಇನ್ನು ಎಷ್ಟು ದಿವಸಗೊಳಗಾಗಿ ರೈತರಿಗೆ ಒದಗಿಸಿಕೊಡುತ್ತೀರೆಂದು ಅಧ್ಯಕ್ಷರ ಮೂಲಕ ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1997-98ನೇ ಸಾಲಿನಲ್ಲಿ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಕೀಟ ನಾಶಕದಿಂದ ತೊಗರಿ ಬೇಳೆ ನಾಶವಾಗಿದೆ. ಪರಿಹಾರಧನ ಕೊಡುವುದಕ್ಕೋಸ್ಕರ ಒಟ್ಟು 21 ಕೋಟಿ 74 ಲಕ್ಷ ರೂಪಾಯಿ ಮಂಜೂರಾತಿಯಾಗಿದೆ. ಇದರಲ್ಲಿ ಈಗಾಗಲೇ 16 ಕೋಟಿ 15 ಲಕ್ಷ ರೂಪಾಯಿ ಈ ಎರಡು ಜಿಲ್ಲೆಗಳಿಗೆ ಬಿಡುಗಡೆಯಾಗಿದೆ. ಗುಲ್ಬರ್ಗ ಜಿಲ್ಲೆಗೆ 17 ಕೋಟಿ ಮತ್ತು ಬೀದರ್ ಜಿಲ್ಲೆಗೆ 5 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಇನ್ನು 5 ಕೋಟಿ 47 ಲಕ್ಷ ರೂಪಾಯಿಗಳು ಬಿಡುಗಡೆ ಆಗಬೇಕಾಗಿರುವುದು ಬಾಕಿ ಇದೆ. ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಮೊನ್ನೆ ನಡೆದ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇವತ್ತು ಇದನ್ನು ಬಿಡುಗಡೆ ಮಾಡುವುದಕ್ಕೆ ಆದೇಶವನ್ನು ಹೊರಡಿಸಿದ್ದೇವೆ. ಇದರಿಂದ ಬಾಕಿ ಇರತಕ್ಕಂಥ ಹಣವನ್ನು ಸೋಮವಾರದೊಳಗೆ ಚೆಕ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

(ಖ) ಕಾಪುವಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಾನ್ಯತೆಯನ್ನು ರದ್ದುಗೊಳಿಸಬಾರದೆಂಬ ಬಗ್ಗೆ

ಶ್ರೀ ವಸಂತ ವಿ. ಸಾಲಿಯಾನ (ಕಾಪು) :— ಮಾನ್ಯ ಅಧ್ಯಕ್ಷರೆ, ಕಾಪುವಿನಲ್ಲಿ ಸರ್ಕಾರ 1992-93ನೇ ಇಸವಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾತಿ ನೀಡಿದ ಬಳಿಕ ಕಾಲೇಜು ಪ್ರಾರಂಭವಾಯಿತು. ಕಾರಣಾಂತರಗಳಿಂದ ಇದಕ್ಕೆ ಬೇಕಾಗಿರುವ ಕಟ್ಟಡ ಇಲ್ಲದೆ, ಕಾಲೇಜನ್ನು ದೇವಸ್ಥಾನಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಈ ಕಾಲೇಜಿಗೆ ಸಾರ್ವಜನಿಕರು 4 ಎಕರೆ ಜಾಗವನ್ನು ಮತ್ತು ಲೈಬ್ರರಿ ಹಾಗೂ ಲೆಕ್ಚರರ್ ಸಂಬಳ ಮತ್ತು ಕ್ಲರ್ಕ್ ಹಾಗೂ ಜವಾನರ ಸಂಬಳವನ್ನು ಕೊಡುತ್ತಾ ಸುಮಾರು 7 ವರ್ಷಗಳಿಂದ ನಡೆಸಿಕೊಂಡು ಬಂದಿದೆ.ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾಲಯದ ಒಂದು ಸಮಿತಿಯವರು ಅದರ ಮಾನ್ಯತೆಯನ್ನು ರದ್ದುಮಾಡಬೇಕೆಂದು ನಿರ್ಣಯ ಮಾಡಿದ್ದಾರೆ. ನಾನು ಮಾನ್ಯ ಸಚಿವರ ಹತ್ತಿರ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತಿದ್ದೇನೆ. ಆ ಒಂದು ನಿರ್ಣಯವನ್ನು ಏನು ಮಂಗಳೂರು ವಿಶ್ವವಿದ್ಯಾಲಯದವರು ತೆಗೆದುಕೊಂಡಿರುತ್ತಾರೆ ಅದು